**ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ ಅರಕಲಗೂಡು**

**ಸಿ.ಸಿ.ನಂಃ 126 / 2021**

**ದಿಃ 27 / 03 /2024**

ಪಿರ್ಯಾದಿ ಃ- ಅರಕಲಗೂಡು ಪೊಲೀಸ್

ಃ ವಿರುದ್ಧ ಃ

ಆರೋಪಿ ಃ- ಕೇಶವ ಹೆಚ್.ಆರ್ ಬಿನ್ ರಂಗಸ್ವಾಮಿ

ಆಪಾದನೆ

ಶ್ರೀಮತಿ ಪ್ರೀತಿ ಎಲ್. ಮಳವಳ್ಳಿ ಬಿ.ಬಿ.ಎ. ಎಲ್.ಎಲ್‌ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅರಕಲಗೂಡು ಆದ ನಾನು, ಆರೋಪಿಯಾದ

ಆರೋಪಿ ಃ ಕೇಶವ ಹೆಚ್.ಆರ್ ಬಿನ್ ರಂಗಸ್ವಾಮಿ
29 ವರ್ಷ,
ನಂ. 118, ಟಿಎಪಿಸಿಎಂಸಿ ಎಂ.ಎಸ್. ಉಪ್ಪಳ್ಳಿ
ಚಿಕ್ಕಮಗಳೂರು ಟೌನ್,
ಚಿಕ್ಕಮಗಳೂರು ಜಿಲ್ಲೆ .

ನಿಮ್ಮ ಮೇಲೆ ಆಪಾದನೆ ಮಾಡುವುದೇನೆಂದರೆ

ದಿನಾಂಕಃ 10/12/2020 ರಂದು ಸಂಜೆ 6-50 ಗಂಟೆಯ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣಾ ವ್ಯಾಪ್ತಿಯ ಶಂಭುನಾಥಪುರ ಗ್ರಾಮದ ಮಂಜುರವರ ಟೈಲ್ಸ್ ಅಂಗಡಿ ಮುಂದೆ ಹೋಗಿರುವ ಅರಕಲಗೂಡು-ಹಾಸನ ಟಾರು ರಸ್ತೆಯಲ್ಲಿ ಚಾಸಾ-1 ರವಿ ಎಸ್.ಕೆ. ರವರ ಚಿಕ್ಕಪ್ಪನ ಮಗ ಮೃತ ಜಗದೀಶ ಮತ್ತು ಮೃತ ವಿನೋದ್ ರವರು ಶಂಭುನಾಥಪುರ ಗ್ರಾಮದಿಂದ ಅರಕಲಗೂಡಿಗೆ ಬರಲು ಕೆಎ-13-ಇಕೆ-9673 ಬೈಕಿನಲ್ಲಿ ಹಾಸನ ಕಡೆಯಿಂದ ರಸ್ತೆಯ ಎಡಬದಿಯಲ್ಲಿ ಬರುತ್ತಿರುವಾಗ ಆರೋಪಿಯಾದ ನೀವು ಕೆಎ-13-ಸಿ-1334 ಟಿಪ್ಪರ್ ಲಾರಿಯನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಎಡ ಬದಿಯಲ್ಲಿ

ಅರಕಲಗೂಡು ಕಡೆಗೆ ಹೋಗುತ್ತಿದ್ದ ಚಾಸಾ-1 ರವಿ ಎಸ್.ಕೆ. ರವರ ಚಿಕ್ಕಪ್ಪನ ಮಗ ಮೃತ ಜಗದೀಶ ಮತ್ತು ಮೃತ ವಿನೋದ್ ರವರ ಕೆಎ-13-ಇಕೆ-9673 ಬೈಕಿಗೆ ಹಿಂಬದಿಯಿಂದ ಡಿಕ್ಕಿಪಡಿಸಿ, ನಂತರ ಅರಕಲಗೂಡು ಕಡೆಯಿಂದ ಗೊರೂರು ಕಡೆಗೆ ಕೆಎ-13-ಇ-ಆರ್-9108 ರ ಬೈಕಿನಲ್ಲಿ ಹೋಗುತ್ತಿದ್ದ ಚಾಸಾ-2 ದಯಾನಂದ ಹಾಗೂ ಚಾಸಾ-3 ನಂದೀಶ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ ಭಾ.ದಂ.ಸಂ. ಕಲಂ 279 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂದು ಆಪಾದಿಸಲಾಗಿದೆ .

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಸದರಿ ಅಪಘಾತದ ಪರಿಣಾಮ ಚಾಸಾ-3 ನಂದೀಶರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಲು ಆರೋಪಿಯಾದ ನೀವು ಕಾರಣರಾಗಿರುತ್ತೀರಿ. ಆದ್ದರಿಂದ ಭಾ.ದಂ.ಸಂ. ಕಲಂ 337 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂದು ಆಪಾದಿಸಲಾಗಿದೆ .

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಸದರಿ ಅಪಘಾತದ ಪರಿಣಾಮ ಚಾಸಾ-2 ದಯಾನಂದರವರಿಗೆ ತೀವ್ರ ಸ್ವರೂಪದ ಗಾಯಗಳಾಗಲು ಆರೋಪಿಯಾದ ನೀವು ಕಾರಣರಾಗಿರುತ್ತೀರಿ. ಆದ್ದರಿಂದ ಭಾ.ದಂ.ಸಂ. ಕಲಂ 338 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂದು ಆಪಾದಿಸಲಾಗಿದೆ .

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಸದರಿ ಅಪಘಾತದ ಪರಿಣಾಮ ಚಾಸಾ-1 ರವಿ ಎಸ್.ಕೆ. ರವರ ಚಿಕ್ಕಪ್ಪನ ಮಗ ಮೃತ ಜಗದೀಶ ಮತ್ತು ಮೃತ ವಿನೋದ್ ರವರು ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದಾಗ ತಲೆ, ಮೈ-ಕೈಗೆ ಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿ, ಸದರಿ ಅಪಘಾತದಿಂದ ಆದ ಗಾಯಗಳಿಂದ ಚಾಸಾ-1 ರವಿ ಎಸ್.ಕೆ. ರವರ ಚಿಕ್ಕಪ್ಪನ ಮಗ ಜಗದೀಶ ಮತ್ತು ವಿನೋದ್ ರವರು ಸ್ಥಳದಲ್ಲಿಯೇ ಮೃತಪಡಲು ಕಾರಣರಾಗಿರುತ್ತೀರಿ. ಆದ್ದರಿಂದ ಭಾ.ದಂ.ಸಂ. ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ .

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಆರೋಪಿಯಾದ ನೀವು ಕೆಎ-13-ಸಿ-1334 ಟಿಪ್ಪರ್ ಲಾರಿ ವಾಹನದಿಂದ ಸದರಿ

ಬೈಕುಗಳಿಗೆ ಡಿಕ್ಕಿಪಡಿಸಿ, ವಾಹನವನ್ನು ನಿಲ್ಲಿಸದೇ ಪೊಲೀಸರಿಗೆ ಮಾಹಿತಿ ನೀಡದೇ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೇ ಹೊರಟು ಹೋಗಿರುತ್ತೀರಿ. ಆದ್ದರಿಂದ ಮೋಟಾರು ವಾಹನ ಕಾಯ್ದೆ ಕಲಂ 187ರ ಅನ್ವಯ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1. ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ

ಪ್ರ-2. ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಆರೋ.ಪಿಗೆ ಆಪಾದನೆಯನ್ನು ರಚಿಸಿ ವಿವರಿಸಿ ಓದಿ ಹೇಳಿದ್ದು ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ)

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಅರಕಲಗೂಡು